ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ಉಡುಪಿ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯಡಿಯಲ್ಲಿ ಬರುವ ರಸ್ತೆಗಳ ಬಗ್ಗೆ

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-

170 (270) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉಡುಪಿ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ರಸ್ತೆಗಳು ಯಾವುವು; ಅವುಗಳ ಉದ್ದವೆಷ್ಟು; (ರಸ್ತೆ ಮತ್ತು ಕಿ.ಮೀ. ವಿವರ ನೀಡುವುದು)

(ಆ) ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ರಸ್ತೆಗಳೆಂದು ಘೋಷಣೆ ಮಾಡಲಾಗಿದ್ದು ಯಾವಾಗ ; (ಘೋಷಣೆಯ ಪ್ರತಿಯನ್ನು ಒದಗಿಸುವುದು)

(ಇ) ಲೋಕೋಪಯೋಗಿ ರಸ್ತೆಗಳ ನಿಗದಿಪಡಿಸಲಾದ ಗಡಿ ರೇಖೆ, ಕಟ್ಟಡ, ರೇಖೆ ಮತ್ತು ನಿಯಂತ್ರಣ ರೇಖೆಗಳು ಯಾವುವು; (ಆದೇಶದ ಪ್ರತಿ ಒದಗಿಸುವುದು) ಈ ಕಟ್ಟಡ ರೇಖೆಗಳು ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಪರಿಮಿತಿಯಲ್ಲಿ ಹಾಗೂ ಮಹಾನಗರ ಪಾಲಿಕೆಯಿಂದ 15 ಕಿ.ಮೀ. ಪರಿಮಿತಿಯಲ್ಲಿ ವ್ಯತ್ಯಾಸವಿರಲು ಕಾರಣವೇನು ?